5. ಮಳಜಾಪುರ
6. ಖಿಟಕ ಚಿಂಚೋಳಿ
7. ಉಚ್ಚಾ
8. ಕುರುಬ ಖೇಳಗಿ
9. ಚಾಳಕಾಪುರ
10. ಹಲ್ಲಿಸಿ ತುಗಾಂವ್
15. ಟಳವಾಡ (ಎಮ್)
16. ತೇಲಗಾಂವ್
17. ಬೌತಂಬ್ರಾ
18. ಕೆಸರ ಗಾಂವ್
19. ಕಾಕನಾಳ

ಈ) ಈ ಕಾಮಗಾರಿಗಳನ್ನು ನಾಲ್ಕು ತಿಂಗಳ ಅವಧಿಯಲ್ಲಿ ಪೂರ್ಣಗೊಳಿಸಲು ಉದ್ದೇಶಿಸಿದೆ.

613(612) : ಶ್ರೀ ಪ್ರಕಾಶ್ ಖಂಡ್ರೆ (ಬಾಲ್ಕಿ) ಮಾನ್ಯ ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೀದರ್ ಜಿಲ್ಲೆಯ ಭಾಲ್ಕಿ ಕ್ಷೇತ್ರದಲ್ಲಿ ಸಂಚರಿಸುವ ಕ.ರಾ.ರ.ಸಾ.ಸಂ. ಕೆಲವು ಹಳ್ಳಿಗಳಲ್ಲಿ ಆದಾಯ ಬರುತ್ತಿಲ್ಲಾ ಎಂದು ಸಂಚಾರ ನಿಲ್ಲಿಸಿರುವುದು ಸರ್ಕಾರದ ಗಮನದಲ್ಲಿದೆಯೇ;

ಆ) ಅದರಿಂದ ಇಂತಹ ಹಳ್ಳಿಗಳ ರೂಟ್‌ನಲ್ಲಿನ ವಿದ್ಯಾರ್ಥಿಗಳು, ಬಡಜನರು, ರೋಗಿಗಳು ಹಾಗೂ ಸಾರ್ವಜನಿಕರು ತಾಲ್ಲೂಕು ಮತ್ತು ಜಿಲ್ಲಾ ಸ್ಥಳಗಳಿಗೆ ಬರಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹಾಗಿದ್ದಲ್ಲಿ, ಈ ಜನರಿಗಾಗುತ್ತಿರುವ ತೊಂದರೆ ನಿವಾರಿಸಲು ಏನು ಕ್ರಮ ಕೈಗೊಳ್ಳಲಾಗುವುದು?

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಮತ್ತು ಸಾರಿಗೆ ಸಚಿವರು)

ಅ) ಕೆಲವು ಮಾರ್ಗಗಳಲ್ಲಿ ಒಂದೆರಡು ಸುತ್ತುಗಳನ್ನು ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ವಿದ್ಯಾರ್ಥಿಗಳು, ಬಡಜನರು, ರೋಗಿಗಳು ಹಾಗೂ ಸಾರ್ವಜನಿಕರು ತಾಲ್ಲೂಕು ಮತ್ತು ಜಿಲ್ಲಾ ಸ್ಥಳಗಳಿಗೆ ಬರಲು, ದಿನಕ್ಕೆ ಕನಿಷ್ಟ 2 ಸುತ್ತುಗಳ ಮತ್ತು ಶಾಲಾ ಮತ್ತು ಕಾಲೇಜು ಸಮಯದ ಸುತ್ತುಗಳು ಕಾರ್ಯಾಚರಣೆಯಲ್ಲಿವೆ. ತೊಂದರೆ ಆಗಿಲ್ಲ.

ಇ) ಪ್ರಯಾಣಿಕರ ಒತ್ತಡ ಇರುವ ಕಡೆ ಹೆಚ್ಚಿನ ಬಸ್ಸುಗಳ ಸೌಕರ್ಯ ಒದಗಿಸಲಾಗುವುದು.

614(568) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಹಲವಾರು ಮಂದಿ ಕಳೆದ 10–20 ವರ್ಷಗಳಿಂದ ಸರ್ಕಾರಿ ಜಾಗದಲ್ಲಿ ಅನಧಿಕೃತವಾಗಿ ವಾಸ್ತವ್ಯವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಇಂತಹ ನೂರಾರು ಮನೆಗಳಿಗೆ ಪಡಿತರ ಚೀಟಿ ಮತದಾರರ ಗುರುತು ಚೀಟಿ ಮುಂತಾದ ಮೂಲಭೂತ ಸೌಕರ್ಯಗಳನ್ನು ನೀಡಿದ್ದಾಗ್ಯೂ ವಿದ್ಯುತ್

ಸಂಪರ್ಕ ನೀಡಲಾಗುತ್ತಿಲ್ಲವೆಂಬ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) ಹೌದಾದಲ್ಲಿ, ಅಂತಹ ಅರ್ಜಿ ನಿವೇಶನ ವಸತಿ ರಹಿತರಿಗೆ ಹಕ್ಕುಪತ್ರ ನೀಡುವ ತನಕ ಕುಟೀರ ಜ್ಯೋತಿ ಸಂಪರ್ಕ ನೀಡಲು ಸರ್ಕಾರ ಉದ್ದೇಶಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಸರ್ಕಾರಿ ಜಾಗದಲ್ಲಿ ಹಲವಾರು ಮಂಡಿ ಕಳೆದ 10–20 ವರ್ಷಗಳಿಂದ ಅನಧಿಕೃತವಾಗಿ ವಾಸ್ತವ್ಯ ಇರುವ ಬಗ್ಗೆ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯಲ್ಲಿ ಮಾಹಿತಿಗಳು ಇರುವುದಿಲ್ಲ.

ಆ) ಮನೆಗಳಲ್ಲಿ ವಾಸ್ತವ್ಯ ಇರುವ ಬಗ್ಗೆ ಪಡಿತರ ಚೀಟಿ ಅಥವಾ ಮತದಾರರ ಗುರುತು ಚೀಟಿಗಳನ್ನು ಹಾಜರುಪಡಿಸಿ ದೃಢೀಕರಿಸಿದಲ್ಲಿ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ವಿದ್ಯುತ್ ಸಂಪರ್ಕವನ್ನು ಕಲ್ಪಿಸುತ್ತದೆ.

ಇ) ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕಗಳನ್ನು ಕಲ್ಪಿಸಬೇಕಾದಲ್ಲಿ ಫಲಾನುಭವಿಗಳನ್ನು ತಾಲ್ಲೂಕು ಪಂಚಾಯತಿಯು ಗುರುತಿಸಬೇಕಾಗಿರುತ್ತದೆ. "ಬಡತನ ರೇಖೆಗಿಂತ ಕೆಳಗಿನವರು" ಯೆಂದು ತಾಲ್ಲೂಕು ಪಂಚಾಯತಿ ವತಿಯಿಂದ ಗುರುತಿಸಲ್ಪಟ್ಟ ಫಲಾನುಭವಿಗಳಿಗೆ ಮಾತ್ರ ಮಂಗಳೂರು ವಿದ್ಯುತ್ ಸರಬರಾಜು ಕಂಪನಿಯು ಕುಟೀರ ಜ್ಯೋತಿ ಯೋಜನೆಯಡಿ ವಿದ್ಯುತ್ ಸಂಪರ್ಕವನ್ನು ಕಲ್ಪಿಸುವ ಬಗ್ಗೆ ನಿಯಮಾನುಸಾರ ಕ್ರಮ ಜರುಗಿಸುತ್ತದೆ.

615(486) : ಶ್ರೀ ರಘುಪತಿ ಭಟ್ ಕೆ. (ಉಡುಪಿ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆಯಲ್ಲಿ ಮೆಸ್ಕಾಂ ಇಲಾಖೆಗೆ ಮಂಜೂರಾಗಿರುವ ಲೈನ್‌ಮನ್ ಹುದ್ದೆಗಳ ಸಂಖ್ಯೆ ಎಷ್ಟು;

ಆ) ಹಾಲಿ ಕೆಲಸ ನಿರ್ವಹಿಸುತ್ತಿರುವ ಲೈನ್‌ಮನ್‌ಗಳ ಸಂಖ್ಯೆ ಎಷ್ಟು;

ಇ) ಖಾಲಿ ಇರುವ ಲೈನ್‌ಮನ್‌ಗಳ ಹುದ್ದೆಯನ್ನು ಯಾವಾಗ ತುಂಬಲಾಗುವುದು;

ಈ) ಉಡುಪಿ ತಾಲ್ಲೂಕಿನ ಹಿರಿಯಣ್ಣ ಮತ್ತು ಪಡುಕೆರೆ ಉದ್ಯಾವರ ಪ್ರದೇಶದಲ್ಲಿ ಲೈನ್‌ಮನ್‌ಗಳ ಕೊರತೆಯಿಂದ ಸಾರ್ವಜನಿಕರಿಗೆ ಆಗುತ್ತಿರುವ ಅನಾನುಕೂಲತೆಯನ್ನು ಪರಿಹರಿಸಲು ತಕ್ಷಣ ಬದಲಿ ಸಿಬ್ಬಂದಿಗಳನ್ನು ಗುತ್ತಿಗೆ ಆಧಾರದಲ್ಲಿ ನೇಮಿಸಲು ಸರ್ಕಾರ ಯೋಚಿಸಿದೆಯೇ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಉಡುಪಿ ಜಿಲ್ಲೆಯಲ್ಲಿ ಮಂಜೂರಾಗಿರುವ ಲೈನ್‌ಮನ್ ಮತ್ತು ಸಹಾಯಕ ಲೈನ್‌ಮನ್ ಹುದ್ದೆಗಳ ಸಂಖ್ಯೆಯು ಅನುಕ್ರಮವಾಗಿ 243 ಮತ್ತು 220 ಇರುತ್ತದೆ.

ಆ) ಪ್ರಸ್ತುತ 185 ಲೈನ್‌ಮನ್ ಮತ್ತು 4 ಸಹಾಯಕ ಲೈನ್‌ಮನ್‌ಗಳು ಕಾರ್ಯ ನಿರ್ವಹಿಸುತ್ತಿದ್ದಾರೆ.